ಅಗತ್ಯವಾದ ಕ್ರಿಯೆಯೇ ವಿನಃ ಅದೇ ಇಡೀ ಬದುಕಲ್ಲ' ಎಂದು ಹಿತನುಡಿಗಳನ್ನಾಡಿದರು. ಸುಬ್ರತೋ ಬ್ಯಾನರ್ಜಿ ಅವರ ಮಾತುಗಳನ್ನಾಲಿಸುತ್ತ ವಸುಮತಿ ಒಂದು ಕ್ಷಣ ತನ್ನ ಇರುವಿಕೆಯನ್ನೇ ಮರೆತಳು. ಅವಳ ಭಾವಕೋಶದ ತುಂಬ ಪ್ರಭಂಜನನೇ ತುಂಬಿಕೊಂಡ. ಪ್ರಭಂಜನನ ವಿಸ್ತಾರವಾದ ಓದು, ಆಸಕ್ತಿ, ವಿದ್ವತ್‌ಗಳೆದುರು ಕಾಮ ಅರ್ಥಹೀನ ಎಂದೆನಿಸತೊಡಗಿತವಳಿಗೆ. ಸಭಾಂಗಣದ ಬಾಗಿಲ ಬಳಿ ಪ್ರದರ್ಶನ ಮತ್ತು ಮಾರಾಟಕ್ಕಿಟ್ಟಿದ್ದ ಮೃಣಾಲಿನಿಯವರ ಪುಸ್ತಕಗಳಿಂದ ಎರಡು ಅನುವಾದಿತ ಕಥಾಸಂಕಲನಗಳನ್ನು ಪ್ರಭಂಜನಗಾಗಿ ಖರೀದಿಸಿ ಮನೆಯತ್ತ ಹೆಜ್ಜೆ ಹಾಕಿದಳು.

★★★

ಮನುಷ್ಯ ಪಾಠ ಕಲಿಯದಿದ್ದರೆ ಕೆಲವೊಮ್ಮೆ ಬದುಕೇ ಅವನಿಗೆ ಪಾಠ ಕಲಿಸುತ್ತದಂತೆ. ವಸುಮತಿಯ ವಿಷಯದಲ್ಲಿ ಈ ಮಾತು ನಿಜವಾಯಿತು. ಕೈಯಲ್ಲಿ ಮೃಣಾಲಿನಿಯವರ ಅನುವಾದಿತ ಕಥಾಸಂಕಲನಗಳನ್ನು ಹಿಡಿದು ಹೊಸ ಮನುಷ್ಯಳಾಗಿ ಅವಸರವಸರದಿಂದ ಮನೆಯತ್ತ ಹೆಜ್ಜೆಹಾಕುತ್ತಿದ್ದವಳನ್ನು ಹಿಂದುಗಡೆಯಿಂದ ಬಂದ ಬೈಕ್ ಸವಾರನೊಬ್ಬ ಅದು ಯಾವ ಮಾಯದಲ್ಲೋ ಗುದ್ದಿ ಮುಂದೆಹೋದ. ಬೈಕ್ ಹಾಯ್ದದ್ದೊಂದು ನೆಪವಾಗಿ ವಸುಮತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವೈದ್ಯರ ಸಲಹೆಯಂತೆ ಒಂದು ತಿಂಗಳ ಕಾಲ ಮನೆಯಲ್ಲಿ ವಿಶ್ರಾಂತಿ ಪಡೆಯಬೇಕಾಯಿತು. ಪರೀಕ್ಷೆ ಕಾಲವಾದ್ದರಿಂದ ಮಗ ಮತ್ತು ಮಗಳು ತಮ್ಮ ಅಸಹಾಯಕತೆಯನ್ನು ತೋಡಿಕೊಂಡು 'ಟೇಕ್ ಕೇರ್ ಮಮ್ಮಿ' ಎಂದು ಮಾತು ಮುಗಿಸಿದ್ದರು. ಆ ಇಡೀ ಒಂದು ತಿಂಗಳು ಪ್ರಭಂಜನ ಕಾಲೇಜಿಗೆ ರಜೆಹಾಕಿ ವಸುಮತಿಯ ಆರೈಕೆಗೆ ನಿಂತ. ಬೆಳಗ್ಗೆ ಬೆಡ್ ಟೀಯಿಂದ ಹಿಡಿದು ರಾತ್ರಿ ಊಟ ಮಾಡಿಸಿ ಮಲಗಿಸುವವರೆಗೂ ಅವಳನ್ನು ಮಗುವಿನಂತೆ ಜೋಪಾನ ಮಾಡಿದ. ಸ್ನಾನ ಮಾಡಿಸುವಾಗ, ಮೈ ಒರೆಸುವಾಗ, ಬಟ್ಟೆ ತೊಡಿಸುವಾಗ ವಸುಮತಿ, ಪ್ರಭಂಜನನ ಕೈಯೊಳಗೆ ಮಗುವಿನಂತಾಗುತ್ತಿದ್ದಳು. ದಿನಗಳುರುಳುತ್ತಿದ್ದಂತೆ ವಸುಮತಿಗೆ ದಾಂಪತ್ಯದಲ್ಲಿ ಕಾಮದಾಚೆಗೂ ಒಂದು ವಿಸ್ತೃತವಾದ ಬದುಕಿದೆ ಎನ್ನುವುದು ಅರ್ಥವಾಗತೊಡಗಿತು. ಈಗ ಅವಳು ಪ್ರಭಂಜನನನ್ನು ಹೊಸ ಅರ್ಥದಲ್ಲಿ ನೋಡುತ್ತಾಳೆ. ಈ ಮೊದಲಿನ ಆತಂಕ, ಉದ್ವಿಗ್ನತೆಗಳಿಲ್ಲದೆ ವಸುಮತಿ ಬದುಕನ್ನು ಪ್ರೀತಿಸಲಾರಂಭಿಸಿದ್ದಾಳೆ. ದಿನದಿನಕ್ಕೂ ಬದಲಾಗುತ್ತಿರುವ ಆಕೆಯನ್ನು ಪ್ರಭಂಜನ ಅವಳೊಂದು ಚಿಕ್ಕಮಗುವೇನೋ ಎನ್ನುವಂತೆ ಪ್ರೀತಿಸತೊಡಗಿದ. ಚೇತರಿಸಿಕೊಂಡು ಪುನಃ ಕೆಲಸಕ್ಕೆ ಹೋಗಲಾರಂಭಿಸಿದ ಮೊದಲ ದಿನ ಪ್ರಭಂಜನನೆ ಅವಳನ್ನು ಬ್ಯಾಂಕ್‌ವರೆಗೂ ಡ್ರಾಪ್ ಮಾಡಿದ. ಅವನೆಡೆ ಕೈಬೀಸಿ ಒಳಹೋಗುತ್ತಿದ್ದವಳ ನಡಿಗೆಯಲ್ಲಿ ಎಂದೂ ಇಲ್ಲದ ಲವಲವಿಕೆ ಇತ್ತು. ಪ್ರಭಂಜನನಿಗೂ ಇಂದು ವಸುಮತಿ ಎಂದಿಗಿಂತ ಹೆಚ್ಚು ಖುಷಿಯಾಗಿದ್ದಾಳೆ ಅನಿಸಿತು.


## ರಾಜಕುಮಾರ ಕುಲಕರ್ಣಿ

ಕಲಬುರಗಿ ತಾಲ್ಲೂಕಿನ ಕುಮಸಿ ಎನ್ನುವ ಹಳ್ಳಿಯವರು. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಸ್ತುತ ಬಾಗಲಕೋಟೆಯ ಬಿ.ವಿ.ವಿ. ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕ. 'ಪೂರ್ಣ ಸತ್ಯ', 'ಮನದ ಮಾತು', 'ಅನಾವರಣ', 'ಅನ್ವೇಷಣೆ', 'ಬೊಗಸೆಯಲ್ಲಿ ಕಡಲು', 'ಭಾವಭಿತ್ತಿ', 'ಹೆಜ್ಜೆ ಮೂಡಿದ ಹಾದಿ' ಎನ್ನುವ ಲೇಖನಗಳ ಸಂಕಲನಗಳು ಮತ್ತು 'ಬೇರಿಗಂಟಿದ ಮರ' ಕಥಾಸಂಕಲನ ಪ್ರಕಟವಾಗಿವೆ.